<u>ದಿನಾಂಕಃ **07-11-2025** ರಂದು ಸಾಕ್ಷಿಯನ್ನು ಪುನಃ ಕರೆಸಿ ಪ್ರಮಾಣವಚನ ಮಾಡಿಸಲಾಯಿತು.</u>

<u>ಮುಖ್ಯವಿಚಾರಣೆಃ ಪ್ರತಿವಾದಿ **1** ರಿಂದ **4** ರ ಪರ ಶ್ರೀ ಎಸ್ ಆರ್ ಎಸ್ ವಕೀಲರಿಂದಃ</u>

ನಾನು ಈ ದಾವೆಯಲ್ಲಿ 3 ನೇ ಪ್ರತಿವಾದಿ ಇದ್ದು, ನನ್ನ ಸಾಕ್ಷ್ಯದ ಮುಖ್ಯವಿಚಾರಣೆಯಾಗಿ ಪ್ರಮಾಣಪತ್ರವನ್ನು ನ್ಯಾಯಾಲಯಕ್ಕೆ ಸಲ್ಲಿಸಿರುತ್ತೇನೆ . ಪ್ರಮಾಣಪತ್ರದಲ್ಲಿ ಬರೆದಿರುವ ವಿಷಯಗಳು ನನಗೆ ತಿಳಿದಿದೆ ಮತ್ತು ಸತ್ಯವಾಗಿದೆ.

ನಾನು ಈ ದಿನ ಸರ್ವೆಯವರು ನೀಡಿದ 2 ನೋಟೀಸ್ ನ ದೃಢಿಕೃತ ಪ್ರತಿಗಳನ್ನು ಹಾಜರುಪಡಿಸಿದ್ದು ಅವುಗಳನ್ನು ಕ್ರಮವಾಗಿ ನಿಡಿ- 1 ಮತ್ತು 2 ಎಂದು, ಭೂಮಾಪಕರು ಸರ್ಕಾರಕ್ಕೆ ನೀಡಿದ ಹೇಳಿಕೆಯ 2 ದೃಢಿಕೃತ ಪ್ರತಿಗಳನ್ನು ಹಾಜರುಪಡಿಸಿದ್ದು ಅವುಗಳನ್ನು ಕ್ರಮವಾಗಿ ನಿಡಿ- 3 ಮತ್ತು 4 ಎಂದು, ಸರ್ವೆ ನಂಬರ್ 42/1 ಇದರ ಅಟ್ಲಾಸ್ ನ ದೃಢಿಕೃತ ಪ್ರತಿಯನ್ನು ಹಾಜರುಪಡಿಸಿದ್ದು ಅದನ್ನು ನಿಡಿ- 5 ಎಂದು, ಸರ್ವೆ ನಂಬರ್ 42 ಇದಕ್ಕೆ ಸಂಬಂಧಿಸಿದ ಎಸ್ ಆರ್ ಟಿಪ್ಪಣಿಯ ದೃಢಿಕೃತ ಪ್ರತಿಯನ್ನು ಹಾಜರುಪಡಿಸಿದ್ದು ಅದನ್ನು ನಿಡಿ- 6 ಎಂದು, ದಿನಾಂಕ 04-06-2022 ರಂದು ನಮ್ಮ ವಕೀಲರ ಮುಖಾಂತರ ಕಳುಹಿಸಿದ ನೋಟೀಸು ಪ್ರತಿಯನ್ನು ಹಾಜರುಪಡಿಸಿದ್ದು ಅದನ್ನು ನಿಡಿ- 7 ಎಂದು, ಅಂಚೆ ರಸೀದಿಯನ್ನು ಹಾಜರುಪಡಿಸಿದ್ದು ಅದನ್ನು ನಿಡಿ- 8 ಎಂದು, ಜಾರಿಯಾಗದೇ ಬಂದ ಅಂಚೆ ಲಕೋಟೆಯನ್ನು ಈಗ ತೆರೆದ ನ್ಯಾಯಾಲಯದಲ್ಲಿ ತೆರೆದು ನೋಡಲಾಗಿ ಸದರಿ ಅಂಚೆ ಲಕೋಟೆಯನ್ನು ನಿಡಿ- 9 ಎಂದು, ಅದರ ಒಳಗೆ ಇದ್ದ ನೋಟೀಸು ಪ್ರತಿಯನ್ನು ನಿಡಿ- 9(ಎ) ಎಂದು, ದಿನಾಂಕ 12-02-2022 ರಂದು ನಮ್ಮ ವಕೀಲರ ಮುಖಾಂತರ ಕಳುಹಿಸಿದ ನೋಟೀಸು ಪ್ರತಿಯನ್ನು ಹಾಜರುಪಡಿಸಿದ್ದು ಅದನ್ನು ನಿಡಿ- 10 ಎಂದು, 2 ಅಂಚೆ ರಸೀದಿಗಳನ್ನು ಹಾಜರುಪಡಿಸಿದ್ದು ಅದನ್ನು ನಿಡಿ- 11 ಮತ್ತು 12 ಎಂದು, 2 ಜಾರಿಯಾಗದೇ ಬಂದ ಅಂಚೆ ಲಕೋಟೆಗಳನ್ನು ಈಗ ತೆರೆದ ನ್ಯಾಯಾಲಯದಲ್ಲಿ ತೆರೆದು ನೋಡಲಾಗಿ ಸದರಿ ಅಂಚೆ ಲಕೋಟೆಗಳನ್ನು ಕ್ರಮವಾಗಿ ನಿಡಿ- 13 ಮತ್ತು 14 ಎಂದು, ಅದರ ಒಳಗೆ ಇದ್ದ ನೋಟೀಸು ಪ್ರತಿಗಳನ್ನು ನಿಡಿ- 13(ಎ) ಮತ್ತು 14(ಎ) ಎಂದು ಗುರುತಿಸಲಾಯಿತು.

ಈ ಹಂತದಲ್ಲಿ ಮುಂದುವರೆದ ಮುಖ್ಯ ವಿಚಾರಣೆಗೆ ಸಮಯ ಕೋರಿದ್ದು, ಸಮಯ ನೀಡಲಾಯಿತು.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯಂತೆ ನನ್ನ ಉಕ್ತಲೇಖನಕ್ಕೆ ಬೆರಳಚ್ಚು ಮಾಡಲಾಗಿದೆ.)

ಓ ಹೇ ಕೇ ಸ ಇ ಎ ಒ

Sd/-xxx

ಹಿರಿಯ ಸಿವಿಲ್ ನ್ಯಾಯಾಧೀಶರುಃ ನ.ರಾ.ಪುರ,
ಸಂಚಾರಿ ನ್ಯಾಯಾಲಯ, ಕೊಪ್ಪ.

ಸಾಕ್ಷಿದಾರರ ಸಹಿಃ